✆ Ph / Fax : 27682035

# ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, ಎ.ಜಿ. ಕಾಂಪ್ಲೆಕ್ಸ್, 1ನೇ ಮಹಡಿ, ಶಾಂತಿನಗರ, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ-562 110, ವೆಬ್‌ಸೈಟ್: www.biaapa.in

ಸಂ: ಬಿಐಎಪಿಎ/ಟಿಪಿ/ಎಲ್‌ಎಒ/417/2009-10 ದಿ:

ಇವರಿಗೆ:

ಉಪನೋಂದಣಾಧಿಕಾರಿಗಳು,
ದೇವನಹಳ್ಳಿ ತಾಲ್ಲೂಕು
ದೇವನಹಳ್ಳಿ

## "ಪ್ರಮಾಣ ಪತ್ರ"

ಮಾನ್ಯರೇ,

ವಿಷಯ :- ಖಾಸಗಿ ಅನುಮೋದಿತ ವಸತಿ ವಿನ್ಯಾಸದಲ್ಲಿನ ಶೇ 60% ರ ನಿವೇಶನಗಳನ್ನು ಬಿಡುಗಡೆ ಮಾಡುವ ಸಂಬಂಧ.

ಉಲ್ಲೇಖ :- 1) ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 112 ಬೆಂರೂಪ್ರಾ 2005 ದಿ: 26-05-2005
2) ಪ್ರಾಧಿಕಾರದ ಜ್ಞಾಪನ ಪತ್ರ ಸಂಖ್ಯೆ: ಬಿಐಎಪಿಎ/ಟಿಪಿ/ಆರ್‌ಎಲ್/212/2005-06 ದಿನಾಂಕ: 06-06-2005
3) ನಿವೇಶನ ಬಿಡುಗಡೆಗೆ ಸಂಬಂಧಿಸಿದಂತೆ ಅರ್ಜಿದಾರರು ಸಲ್ಲಿಸಿರುವ ಮನವಿ ಪತ್ರ ದಿ: 09-12-2010
4) ದಿ: 09-08-2010 ರಂದು ನಡೆದ ಪ್ರಾಧಿಕಾರದ 65 ನೇ ಸಭೆಯ ವಿಷಯ ಸಂಖ್ಯೆ: 65 [3(1)] ರ ಬಗ್ಗೆ ಕೈಗೊಂಡ ನಿರ್ಣಯ.

***************

ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ, ಇಲತೊರೆ ಗ್ರಾಮದ ಸರ್ವೆ ನಂ. 141 (ಹಳೇ ಸರ್ವೆ ನಂ. 45/ಪಿ8) ರಲ್ಲಿನ 2ಎಕರೆ 38ಗುಂಟೆ ವಿಸ್ತೀರ್ಣದ ಜಮೀನಿನಲ್ಲಿ ವಸತಿ ವಿನ್ಯಾಸ ನಕ್ಷೆಯ ಅನುಮೋದನೆಗಾಗಿ ಕೋರಿರುವ ಅರ್ಜಿಯನ್ನು ಪರಿಶೀಲಿಸಲಾಗಿ, ಸರ್ಕಾರಿ ಅಧಿಸೂಚನೆ ಸಂಖ್ಯೆ : ನಅಇ/157/ ಬಿಎಂಆರ್/2005 ದಿನಾಂಕ: 27-01-2009 ರಲ್ಲಿನ ನಿರ್ದೇಶನದಂತೆ ಹಾಗೂ ಉಲ್ಲೇಖ (4) ರ ದಿ: 09-08-2010 ರಂದು ನಡೆದ ಪ್ರಾಧಿಕಾರದ 65 ನೇ ಸಭೆಯ ವಿಷಯ ಸಂಖ್ಯೆ: 65 [3(1)] ರ ಬಗ್ಗೆ ಕೈಗೊಂಡ ನಿರ್ಣಯದಂತೆ ಷರತ್ತುಗಳಿಗೆ ಒಳಪಟ್ಟು ವಿನ್ಯಾಸ ನಕ್ಷೆಯನ್ನು ಅನುಮೋದಿಸಲಾಗಿದೆ. ಈ ವಿನ್ಯಾಸದಲ್ಲಿ ವಿವಿಧ ಅಳತೆಗಳ ಒಟ್ಟು 38 ನಿವೇಶನಗಳಿವೆ.

*ಸರ್ಕಾರದ ದಿನಾಂಕ : 26-05-2005 ರ ಸುತ್ತೋಲೆಯ ಕ್ರಮ ಸಂಖ್ಯೆ : ನಅಇ 112 ಬೆಂರೂಪ್ರಾ 2005 ದಿ: 26-05-2005* ರನ್ವಯ ಅನುಮೋದಿತ ವಸತಿ ವಿನ್ಯಾಸದಲ್ಲಿನ ಈ ಕೆಳಕಂಡ ಶೇ 60% ರ ನಿವೇಶನಗಳನ್ನು ಬಿಡುಗಡೆ ಮಾಡಲು ಅರ್ಜಿದಾರರು ಉಲ್ಲೇಖ (3) ರಲ್ಲಿನ ಅವರ ಮನವಿಯಲ್ಲಿ ಕೋರಿಕೆಯನ್ನು ಸಲ್ಲಿಸಿರುತ್ತಾರೆ.

| ಕ್ರ.ಸಂ | ವಿಸ್ತೀರ್ಣ | ನಿವೇಶನ ಸಂಖ್ಯೆ | ಒಟ್ಟು |
|---|---|---|---|
| 1. | 9.14 ಮೀ X 15.24 ಮೀ | 17, 19, 20, 21, 22, 23, 24, 26, 27 ಮತ್ತು 28........ | 10 |
| 2. | ಅನಿಯತ ನಿವೇಶನಗಳು | 1, 3, 4, 6, 7, 9, 10, 12, 13, 31, 33, 34, 36 ಮತ್ತು 37........ | 14 |
| | | ಒಟ್ಟು | 24 |

ಅಡಕ: ಮೇಲ್ಕಂಡ ನಿವೇಶನಗಳನ್ನು ಗುರ್ತಿಸಿರುವ ನಕ್ಷೆಯ ಪ್ರತಿಯನ್ನು ಈ ಕೂಡ ಲಗತ್ತಿಸಿದೆ.

15/12

ನಗರ ಮತ್ತು ಗ್ರಾಮಾಂತರ ಯೋಜನಾ
ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ,
ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ
ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ,
ದೇವನಹಳ್ಳಿ

O/C

(64)

✆ Ph / Fax : 27682035

# ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, ಎ.ಜೆ. ಕಾಂಪ್ಲೆಕ್ಸ್, 1ನೇ ಮಹಡಿ, ಶಾಂತಿನಗರ, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ-562 110, ವೆಬ್‌ಸೈಟ್: www.biaapa.in

## "ಪ್ರಾರಂಭಿಕ ಪ್ರಮಾಣ ಪತ್ರ"

(ನಮೂನೆ-3)

ಸಂ: ಬಿಐಎಪಿಎ/ಟಿಪಿ/ಎಲ್‌ಎಒ/417/2009-10 ದಿ: 15 DEC 2010

ವಿಷಯ : ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ, ಇಲತೊರೆ ಗ್ರಾಮದ ಸರ್ವೆ ನಂ. 141 (ಹಳೇ ಸರ್ವೆ ನಂ. 45/ಪಿ8) ರಲ್ಲಿನ 2ಎಕರೆ 38ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ ವಸತಿ ಉದ್ದೇಶದ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ :- 1) ನಿಮ್ಮ ಅರ್ಜಿ ಸಂಖ್ಯೆ 1889 ದಿ: 19-03-2010 ಮತ್ತು ಮನವಿ ಪತ್ರ ದಿ: 09-12-2010 ಹಾಗೂ ಶುಲ್ಕಗಳನ್ನು ಪಾವತಿಸಿದ ದಿನಾಂಕ: 09-11-2010 ಮತ್ತು ಪರಿತ್ಯಜನಾ ಪತ್ರ ಸಂ. DNH-1-03998-2010-11 ದಿ: 07-12-2010

2) ಜಿಲ್ಲಾಧಿಕಾರಿಗಳವರ ಕಾರ್ಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರು ಹೊರಡಿಸಿರುವ ಅಧಿಕೃತ ಜ್ಞಾಪನ ಪತ್ರಗಳ ಸಂಖ್ಯೆ: ಎಎಲ್‌ಎನ್: ಎಸ್.ಆರ್ (ದೇ) 26/2003-04 ದಿ: 12-04-2004

3) ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ/157/ಬಿಎಂಆರ್/2005 ದಿನಾಂಕ: 27-01-2009

4) ದಿ: 09-08-2010 ರಂದು ನಡೆದ ಪ್ರಾಧಿಕಾರದ 65 ನೇ ಸಭೆಯ ವಿಷಯ ಸಂಖ್ಯೆ: 65 [3(1)] ರ ಬಗ್ಗೆ ಕೈಗೊಂಡ ನಿರ್ಣಯ.

************

ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ಎಸ್. ಜೀವನ್‌ರಾವ್ ಇವರು ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ, ಇಲತೊರೆ ಗ್ರಾಮದ ಸರ್ವೆ ನಂ. 141 (ಹಳೇ ಸರ್ವೆ ನಂ. 45/ಪಿ8) ರಲ್ಲಿನ **2ಎಕರೆ 38ಗುಂಟೆ** ವಿಸ್ತೀರ್ಣದ ಜಮೀನಿನಲ್ಲಿ ವಸತಿ ವಿನ್ಯಾಸ ನಕ್ಷೆ ಅನುಮೋದನೆಗಾಗಿ ಕೋರಿರುವ ಅರ್ಜಿಯನ್ನು ಪರಿಶೀಲಿಸಲಾಗಿ, ಪ್ರಸ್ತಾವಿತ ಜಮೀನು ಉಲ್ಲೇಖ (2) ರಂತೆ ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರಿಂದ ವಸತಿ ಉದ್ದೇಶಕ್ಕಾಗಿ ಭೂ ಪರಿವರ್ತನೆಗೊಂಡಿರುತ್ತದೆ. ಉಲ್ಲೇಖ (3) ರ ದಿ: 09-08-2010 ರಂದು ನಡೆದ ಪ್ರಾಧಿಕಾರದ 65 ನೇ ಸಭೆಯ ವಿಷಯ ಸಂಖ್ಯೆ: 65 [3(1)] ರ ಸಭೆಯ ನಿರ್ಣಯದಂತೆ ಅರ್ಜಿದಾರರು ಉಲ್ಲೇಖ (1) ರಲ್ಲಿರುವಂತೆ ನಿಗಧಿತ ಶುಲ್ಕಗಳನ್ನು ಪಾವತಿಸಿರುತ್ತಾರೆ ಹಾಗೂ ವಿನ್ಯಾಸದಲ್ಲಿನ ಉದ್ಯಾನವನ, ನಾಗರೀಕ ಸೌಲಭ್ಯ ಮತ್ತು ರಸ್ತೆ ಜಾಗಗಳನ್ನು ಪರಿತ್ಯಜನಾ ಪತ್ರದ ಮುಖಾಂತರ **ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳು**, ಕನ್ನಮಂಗಲ ಗ್ರಾಮ ಪಂಚಾಯಿತಿ ಇವರಿಗೆ ನೋಂದಾಯಿಸಿರುತ್ತಾರೆ. ಆದ ಕಾರಣ ಉಲ್ಲೇಖ (3) ರ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ/157/ಬಿಎಂಆರ್/2005 ದಿನಾಂಕ: 27-01-2009 ರಲ್ಲಿನ ನಿರ್ದೇಶನದಂತೆ ಮತ್ತು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ ಪ್ರಕರಣ 17 ರಡಿಯಲ್ಲಿ ವಸತಿ ವಿನ್ಯಾಸ ನಕ್ಷೆ ಅನುಮೋದನೆಗೆ ಸಂಬಂಧಿಸಿದಂತೆ ಅಭಿವೃದ್ಧಿ ಕಾರ್ಯವನ್ನು ಪ್ರಾರಂಭಿಸಲು ಅನುಮತಿ ನೀಡಿ ಈ ಕೆಳಕಂಡ ನಿಬಂಧನೆಗಳೊಡನೆ ನಕ್ಷೆಯನ್ನು ಅನುಮೋದಿಸಲಾಗಿದೆ. ಈ ವಸತಿ ವಿನ್ಯಾಸದಲ್ಲಿ ಒಟ್ಟು 38 ವಿವಿಧ ಅಳತೆಗಳ ನಿವೇಶನಗಳಿವೆ.

1. ಈಗ ನೀಡಿರುವ ವಿನ್ಯಾಸ ಮಂಜೂರಾತಿಯ ಅವಧಿಯು ಮಂಜೂರಾತಿ ನೀಡಿದ ದಿನದಿಂದ ಎರಡು ವರ್ಷಗಳವರೆಗೆ ಮಾತ್ರ ಜಾರಿಯಲ್ಲಿರುತ್ತದೆ. ಈ ಅವಧಿಯಲ್ಲಿ ವಿನ್ಯಾಸದ ಅಭಿವೃದ್ಧಿ ಪೂರ್ಣಗೊಳ್ಳದಿದ್ದಲ್ಲಿ ವಿನ್ಯಾಸದ ಅನುಮತಿಯನ್ನು ನವೀಕರಿಸಿಕೊಳ್ಳತಕ್ಕದ್ದು.
2. ಅನುಮೋದಿತ ರೂಪರೇಖಾ ನಕ್ಷೆಯಂತೆ ಹಾಗೂ ಪೂರಕ ರಸ್ತೆಯನ್ನು ಸೇರಿಸಿ ವಿನ್ಯಾಸವನ್ನು ಜಮೀನಿನಲ್ಲಿ ಅಭಿವೃದ್ಧಿ ಪಡಿಸಿದ ನಂತರವೇ ಅಂದರೆ ರಸ್ತೆಯ ನಿರ್ಮಾಣ, ಒಳಚರಂಡಿ ವ್ಯವಸ್ಥೆ, ಕುಡಿಯುವ ನೀರಿನ ಸೌಕರ್ಯ, ವಿದ್ಯುತ್ ವ್ಯವಸ್ಥೆ ಇತ್ಯಾದಿಗಳನ್ನು ನಿರ್ಮಿಸಿ, ಸಂಬಂಧಿಸಿದ ಇಲಾಖೆಗಳಿಂದ ಕೆಲಸ ಪೂರ್ಣಗೊಂಡಿರುವ ಬಗ್ಗೆ ದೃಢೀಕರಣ ಪತ್ರದೊಂದಿಗೆ ಪ್ರಾಧಿಕಾರದ ಪರಿಶೀಲನೆಗಾಗಿ ತಿಳಿಸತಕ್ಕದ್ದು ಮತ್ತು ಪ್ರಾಧಿಕಾರದಿಂದ ವಿನ್ಯಾಸಕ್ಕೆ ಅಂತಿಮ ಅನುಮೋದನೆ ಪಡೆಯತಕ್ಕದ್ದು.

15/12

3. ವಿನ್ಯಾಸ ಪ್ರದೇಶವನ್ನು ರೂಪರೇಖಾ ನಕ್ಷೆಯಂತೆ ಈ ಪ್ರಾಧಿಕಾರದಿಂದ ಅನುಮೋದನೆ ನೀಡಿದ 24 ತಿಂಗಳ ಒಳಗಾಗಿ ಸಂಪೂರ್ಣವಾಗಿ (ಉದ್ಯಾನವನ, ನಾಗರೀಕ ಸೌಲಭ್ಯಕ್ಕೆ ಮೀಸಲಿಟ್ಟ ಜಾಗಗಳು, ಒಳಚರಂಡಿ, ವ್ಯವಸ್ಥೆ, ನೀರಿನ ಸೌಕರ್ಯ, ವಿದ್ಯುತ್ ಸಂಪರ್ಕ) ಅಭಿವೃದ್ಧಿಪಡಿಸತಕ್ಕದ್ದು. ತಪ್ಪಿದಲ್ಲಿ ಸರ್ಕಾರದ ಸುತ್ತೋಲೆ ಸಂಖ್ಯೆ : ನಅಇ: 112: ಬೆಂರೂಪ್ರಾ: 2005 ದಿ : 26–05–2005 ರಂತೆ ಮುಂದಿನ ಕ್ರಮ ಜರುಗಿಸಲಾಗುವುದು.

4. ಪ್ರಸ್ತಾವಿತ ವಿನ್ಯಾಸಕ್ಕೆ ಅಂತಿಮ ಅನುಮೋದನೆ ನೀಡುವ ಸಮಯದಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರಿಂದ ನಿರಾಕ್ಷೇಪಣಾ ಪತ್ರವನ್ನು ಪಡೆಯತಕ್ಕದ್ದು.

5. ಈ ಪ್ರಾಧಿಕಾರದ ಪೂರ್ವಾನುಮತಿಯಿಲ್ಲದೆ ವಿನ್ಯಾಸದಲ್ಲಿ ಯಾವುದೇ ಬದಲಾವಣೆಯನ್ನು ಮಾಡಬಾರದು.

6. ಈ ಪ್ರದೇಶದಲ್ಲಿ ಹಾಲಿ ಇರುವ ಗಿಡಮರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಳ್ಳತಕ್ಕದ್ದು ಮತ್ತು ರಸ್ತೆಗಳ ಎರಡೂ ಕಡೆ ಹಾಗೂ ಉದ್ಯಾನವನಗಳಲ್ಲಿ ಹೊಸ ಸಸ್ಯಗಳನ್ನು ಬೆಳೆಸುವುದು.

7. ಅನುಮೋದಿತ ವಿನ್ಯಾಸದಲ್ಲಿನ ಕಟ್ಟಡಗಳಲ್ಲಿ ಮಳೆ ನೀರು ಸಂಗ್ರಹಣೆಯನ್ನು ಕಡ್ಡಾಯವಾಗಿ ಅಳವಡಿಸುವುದು ಮತ್ತು ವಿನ್ಯಾಸದಲ್ಲಿ ಅಂತರ್ ಜಲವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.

8. ಅನುಮೋದಿತ ವಿನ್ಯಾಸದಲ್ಲಿರುವ ರಸ್ತೆಗಳು, ಉದ್ಯಾನವನವನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಿ ಈ ಪ್ರಾಧಿಕಾರದಿಂದ ತಿಳಿಸುವವರೆಗೆ ನಿರ್ವಹಣೆಯನ್ನು ಮಾಡತಕ್ಕದ್ದು ಹಾಗೂ ಸಾರ್ವಜನಿಕ ಸೌಲಭ್ಯಕ್ಕೆ ಕಾಯ್ದಿರಿಸಿರುವ ಪ್ರದೇಶಗಳನ್ನು ಒತ್ತುವರಿಯಾಗದಂತೆ ಸಂರಕ್ಷಿಸತಕ್ಕದ್ದು.

9. ವಿನ್ಯಾಸದಲ್ಲಿನ ರಸ್ತೆಗಳಿಂದ ಅಕ್ಕಪಕ್ಕದ ಜಮೀನುಗಳಿಗೆ ಇರುವ ಸಂಪರ್ಕವನ್ನು ಯಾವುದೇ ಕಾರಣಕ್ಕೂ ನಿರ್ಬಂಧಿಸತಕ್ಕದ್ದಲ್ಲ.

10. ವಿನ್ಯಾಸವನ್ನು ಅಭಿವೃದ್ಧಿಪಡಿಸುವಾಗ ಉದ್ಯಾನವನ, ನಾಗರೀಕ ಸೌಲಭ್ಯ ಹಾಗೂ ರಸ್ತೆಗಾಗಿ ಕಾಯ್ದಿರಿಸಿರುವ ಜಾಗಗಳನ್ನು ಅನುಮೋದಿತ ವಿನ್ಯಾಸದಂತೆ ಅಭಿವೃದ್ಧಿಪಡಿಸಬೇಕು.

11. ಈ ಅನುಮೋದನೆಯು ತಾಂತ್ರಿಕವಾಗಿರುವುದರಿಂದ, ಇದನ್ನು ಜಮೀನಿನ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸಲು ಉಪಯೋಗಿಸಲು ಬರುವುದಿಲ್ಲ.

12. ಜಮೀನಿಗೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಪ್ರಾದಿಕಾರವು ಜವಾಬ್ದಾರಿಯಾಗಿರುವುದಿಲ್ಲ.

13. ವಿನ್ಯಾಸ ಅಂಗೀಕಾರ ಕೋರಿಕೆ ಸಂಬಂಧ ತಮ್ಮಿಂದ ಸಲ್ಲಿಸಲಾಗಿರುವ ಭೂ ಮಾಲೀಕತ್ವ ದಾಖಲೆ ಮತ್ತು ಇತರೆ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಗಳು ಸುಳ್ಳಾಗಿದ್ದಲ್ಲಿ ಅಥವಾ ಪೋರ್ಜರಿಯಾಗಿದ್ದಲ್ಲಿ ವಿನ್ಯಾಸಕ್ಕೆ ನೀಡಿರುವ ಅಂಗೀಕಾರ ತಾನೇ ತಾನಾಗಿ ರದ್ದುಗೊಳ್ಳುತ್ತದೆ.

14. ಈ ವಿನ್ಯಾಸದಲ್ಲಿ ಬರುವ ನಿವೇಶನಗಳ ಮಾರಾಟ ಸಂಬಂಧ ನೀಡುವ ಪ್ರಚಾರದಲ್ಲಿ ಪ್ರಾಧಿಕಾರದಿಂದ ಅನುಮೋದನೆ ಆಗಿರುವ ಅನುಮೋದನೆ ಸಂಖ್ಯೆ ಮತ್ತು ದಿನಾಂಕವನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.

15. ರಸ್ತೆ ಬದಿಯಲ್ಲಿ ಪಾದಚಾರಿಗಳು ಓಡಾಡಲು ಅನುಕೂಲವಾಗುವಂತೆ ಸೂಕ್ತವಾಗಿ ಪಾದಚಾರಿ ಮಾರ್ಗವನ್ನು (Paved Footpath) ನಿರ್ಮಿಸುವುದು.

16. ನೀರು ಸರಬರಾಜು ವ್ಯವಸ್ಥೆ ಬಗ್ಗೆ ಸರ್ಕಾರವು ಮುಂದೆ ವಿಧಿಸುವ ಯಾವುದೇ ಹೆಚ್ಚಿನ ಶುಲ್ಕಗಳನ್ನು ಅಭಿವೃದ್ಧಿದಾರರೇ ಭರಿಸಲು ಬದ್ಧರಾಗಿರಬೇಕು.

17. ವಿನ್ಯಾಸದಲ್ಲಿನ ನೀರಿನ ಪೂರೈಕೆಗೆ ಅನುಗುಣವಾಗಿ ಅಗತ್ಯ ಮೇಲ್ಮಟ್ಟದ ನೀರಿನ ಟ್ಯಾಂಕ್ (Over Head Tank) ಅನ್ನು ಕಡ್ಡಾಯವಾಗಿ ಅಳವಡಿಸುವುದು.

18. ನೀರು ಸರಬರಾಜು ವ್ಯವಸ್ಥೆಯ ಬಗ್ಗೆ ಆಗುವ ಅನಾನುಕೂಲಗಳ ಬಗ್ಗೆ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.

19. ಮೇಲ್ಕಂಡ ಯಾವುದೇ ಷರತ್ತುಗಳನ್ನು ಹಾಗೂ ಈ ಕೆಳಗಿನ ಇತರೆ ಯಾವುದೇ ಪ್ರಾಧಿಕಾರವು ವಿಧಿಸುವ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ, ಪ್ರಾಧಿಕಾರವು ನೀಡಿರುವ ಮಂಜೂರಾತಿಯು ಕೂಡಲೇ ರದ್ದಾಗುವುದು.

15/12

(63)
✆ Ph / Fax : 27682035
# ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ
ನಂ. 333/1, ಎ.ಜಿ. ಕಾಂಪ್ಲೆಕ್ಸ್, 1ನೇ ಮಹಡಿ, ಶಾಂತಿನಗರ, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ-562 110, ವೆಬ್‌ಸೈಟ್: www.biaapa.in

20. ಅರ್ಜಿದಾರರ ಮನವಿಯಂತೆ, ಸರ್ಕಾರದ ಸುತ್ತೋಲೆ ಸಂಖ್ಯೆ : ನಅಇ 112 ಬೆಂದೂಪ್ರಾ 2005 ದಿನಾಂಕ : 26-05-2005 ರಲ್ಲಿನ ಮಾರ್ಗಸೂಚಿಯಂತೆ ಈ ಕೆಳಕಂಡ ಶೇ 60% ರ ನಿವೇಶನಗಳನ್ನು ನೋಂದಣಿಗಾಗಿ ಬಿಡುಗಡೆ ಮಾಡಲಾಗಿದೆ.

| ಕ್ರ.ಸಂ | ವಿಸ್ತೀರ್ಣ | ನಿವೇಶನ ಸಂಖ್ಯೆ | ಒಟ್ಟು |
|---|---|---|---|
| 1. | 9.14 ಮೀ X 15.24 ಮೀ | 17, 19, 20, 21, 22, 23, 24, 26, 27 ಮತ್ತು 28...................... | 10 |
| 2. | ಅನಿಯತ ನಿವೇಶನಗಳು | 1, 3, 4, 6, 7, 9, 10, 12, 13, 31, 33, 34, 36 ಮತ್ತು 37...................... | 14 |
| | | ಒಟ್ಟು | 24 |
| | | | |

ಮೇಲಿನಂತೆ ನೀಡಲಾಗಿರುವ ಅನುಮತಿಗೆ ವ್ಯತಿರಿಕ್ತವಾಗಿ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಂಡಲ್ಲಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 17 (4) ರಂತೆ ಕ್ರಮ ಕೈಗೊಳ್ಳಲು ಅವಕಾಶ ಇರುವುದನ್ನು ನಿಮ್ಮ ಗಮನಕ್ಕೆ ತರಲಾಗಿದೆ.

15/12

ನಗರ ಮತ್ತು ಗ್ರಾಮಾಂತರ ಯೋಜನಾ
ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ,
ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ
ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ,
ದೇವನಹಳ್ಳಿ.

ಪತ್ರವನ್ನು ರವಾನಿಸಲಾಗಿದೆ
ದಿನಾಂಕ 15/12/10

O/C

ಪ್ರತಿಯನ್ನು :-
1) ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳು, ಕನ್ನಮಂಗಲ ಗ್ರಾಮ ಪಂಚಾಯಿತಿ, ಕಸಬಾ ಹೋಬಳಿ, ದೇವನಹಳ್ಳಿ ತಾಲ್ಲೂಕು ರವರಿಗೆ ಅನುಮೋದಿತ ವಸತಿ ವಿನ್ಯಾಸ ನಕ್ಷೆಯ 4 ಪ್ರತಿಗಳೊಂದಿಗೆ ಮುಂದಿನ ಕ್ರಮಕ್ಕಾಗಿ.
2) ಉಪನೋಂದಣಾಧಿಕಾರಿಗಳು, ದೇವನಹಳ್ಳಿ ತಾಲ್ಲೂಕು, ದೇವನಹಳ್ಳಿ ಇವರ ಮಾಹಿತಿಗಾಗಿ.
3) ಕಚೇರಿ ಕಡತಕ್ಕೆ.

ಯಥಾ ಪ್ರತಿಯನ್ನು :-
1) ಶ್ರೀ ಎಸ್. ಜೀವನ್‌ರಾವ್ ಬಿನ್ ಲೇಟ್॥ ಶ್ರೀನಿವಾಸರಾವ್, ನಂ. 122, ಕನ್ನಮಂಗಲ ಗ್ರಾಮ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರ ಮಾಹಿತಿಗಾಗಿ.